<u>ಕರ್ನಾಟಕ ಲೋಕಾಯುಕ್ತ</u>

ನಂ.ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ-3196/2017/ಡಿಆರ್‌ಇ-3

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ: 09/01/2018

## <u>ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ಕಲಂ 12(3) ರನ್ವಯ ವರದಿ</u>

<u>ವಿಷಯ:</u> ಶ್ರೀ ಶ್ರೀಶೈಲ ಬಿನ್ ಮಲ್ಲಿಕಾರ್ಜುನ ಗಂವಾರ, ಪ್ರಥಮ ದರ್ಜೆ ಸಹಾಯಕರು, ಕಲಬುರಗಿ ಮತ್ತು ಯಾದಗಿರ ಜಿಲ್ಲಾ ಸಹಕಾರ ಬ್ಯಾಂಕ್ (ಡಿ.ಸಿ.ಸಿ. ಬ್ಯಾಂಕ್), ಕಲಬುರಗಿ ಆದ ನೀವು ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು ದುರ್ನಡತೆ/ ದುರ್ವರ್ತನೆಯಿಂದ ನಡೆದುಕೊಂಡಿರುವ-ಕುರಿತು.,

*****

ಮಾನ್ಯ ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಪೊಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಕಲಬುರಗಿ (ಇನ್ನು ಮುಂದೆ 'ತನಿಖಾಧಿಕಾರಿ' ಎಂದು ಕರೆಯಲ್ಪಡುತ್ತಾರೆ) ಇವರ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ ವರದಿಯಲ್ಲಿ ಶ್ರೀ ಶ್ರೀಶೈಲ ಬಿನ್ ಮಲ್ಲಿಕಾರ್ಜುನ ಗಂವಾರ, ಪ್ರಥಮ ದರ್ಜೆ ಸಹಾಯಕರು, ಕಲಬುರಗಿ ಮತ್ತು ಯಾದಗಿರ ಜಿಲ್ಲಾ ಸಹಕಾರ ಬ್ಯಾಂಕ್ (ಡಿ.ಸಿ.ಸಿ. ಬ್ಯಾಂಕ್), ಕಲಬುರಗಿ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು ದೂರುದಾರರಾದ ಶ್ರೀ ಗಿರೆಪ್ಪ ಬಿನ್ ಮಹಾದೇವಪ್ಪ ಸೊಲಹಳ್ಳಿ, ನರಿಬೋಳ ಗ್ರಾಮ, ಜೇವಗಿ ತಾಲ್ಲೂಕು, ಕಲಬುರಗಿ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಎದುರುದಾರರನ್ನು ಬೇಟಿ ಮಾಡಿದಾಗ ದುರ್ನಡತೆ ತೋರಿಸಿರುತ್ತಾರೆ ಎಂದು ವರದಿ ಸಲ್ಲಿಸಿದ ಮೇರೆಗೆ, ದಾಖಲೆಗಳನ್ನು ಪರಿಶೀಲಿಸಿದಾಗ, ಎದುರುದಾರರು ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7 ರನ್ವಯ ಗೌರವಾನ್ವಿತ ಉಪಲೋಕಾಯುಕ್ತರವರು ತನಿಖೆ ಕೈಗೊಂಡಿರುತ್ತಾರೆ.

2. **ನಿಮ್ಮ ಮೇಲಿನ ಆಪಾದನೆಯ ಸಂಕ್ಷಿಪ್ತ ಸಾರಾಂಶ :-**

I. ದೂರುದಾರರಿಗೆ ನರಿಬೋಳ ಗ್ರಾಮದಲ್ಲಿ 39 ಎಕರೆ ಕೃಷಿ ಜಮೀನಿದ್ದು, ಸದರಿ ಜಮೀನಿನಲ್ಲಿ ಕೃಷಿ ಮಾಡಿಕೊಂಡು ಜೀವನ ಸಾಗಿಸುತ್ತಿದ್ದು, ಈ ಮಧ್ಯೆ ದೂರುದಾರರು ಅವರ ತಂದೆಯ

ಹೆಸರಿನಲ್ಲಿದ್ದ ಕೃಷಿ ಜಮೀನು ಸರ್ವೆ ನಂ. 67, ವಿಸ್ತೀರ್ಣ 12 ಎಕರೆ 33 ಗುಂಟೆ ಜಮೀನಿನ ಮೇಲೆ ಕಲಬುರಗಿ ಜಿಲ್ಲಾ ಸಹಕಾರ ಬ್ಯಾಂಕ್ ನಿ., ಕಲಬುರಗಿ ಇಲ್ಲಿಂದ ಮಧ್ಯಮಾವಧಿ ಕೃಷಿ ಸಾಲ ಯೋಜನೆಯ ಅಡಿಯಲ್ಲಿ ಟ್ರ್ಯಾಕ್ಟರ್ ಮತ್ತು ಟ್ರೈಲರ್ ಹಾಗೂ ಕೃಷಿ ಉಪಕರಣಗಳ ಸಾಲ ಪಡೆಯಲು ಇಚ್ಛಿಸಿದ್ದು, ಈ ಸಂಬಂಧ ದಿನಾಂಕ: 16/04/2015 ರಂದು ಅರ್ಜಿಯನ್ನು ಸಲ್ಲಿಸಿರುತ್ತಾರೆ.

II. ಸದರಿ ಸಾಲಕ್ಕೆ ಸಂಬಂಧಪಟ್ಟಂತೆ ದೂರುದಾರರು ಎದುರುದಾರರನ್ನು ಸಾಕಷ್ಟು ಸಲಾ ಬ್ಯಾಂಕಿನಲ್ಲಿ ಬೇಟಿ ಮಾಡಿರುತ್ತಾರೆ. ಇದು ಅಲ್ಲದೇ, ಪುನ: ದೂರುದಾರರು ದಿನಾಂಕ: 15/07/2015 ರಂದು ಎದುರುದಾರರನ್ನು ಬ್ಯಾಂಕಿನಲ್ಲಿ ಬೇಟಿ ಮಾಡಿ ಸಾಲದ ಅರ್ಜಿಯ ಬಗ್ಗೆ ವಿಚಾರಿಸಲಾಗಿ, ಎದುರುದಾರರು ಬ್ಯಾಂಕಿನ ಮ್ಯಾನೇಜಿಂಗ್ ಡೈರೆಕ್ಟರ್ (ಎಂ.ಡಿ.,) ರವರನ್ನು ಬೇಟಿ ಮಾಡಲು ತಿಳಿಸಿರುತ್ತಾರೆ. ಎದುರುದಾರರ ಮಾತಿನ ಪ್ರಕಾರ ದೂರುದಾರರು ಮ್ಯಾನೇಜಿಂಗ್ ಡೈರೆಕ್ಟರ್ (ಎಂ.ಡಿ.,) ರವರನ್ನು ಬೇಟಿ ಮಾಡಿ ಸಾಲದ ಅರ್ಜಿ ಬಗ್ಗೆ ವಿಚಾರಿಸಲಾಗಿ, ಎಂ.ಡಿ., ರವರು ಎದುರುದಾರರನ್ನು ಕರೆದು ಸಾಲದ ಮಂಜೂರಾತಿ ಆದೇಶದ ಮೇಲೆ ಸಹಿ ಮಾಡಿ ಎದುರುದಾರರ ಬಳಿ ಕೊಟ್ಟಿದ್ದು ಇರುತ್ತದೆ.

III. ತದನಂತರ ಎದುರುದಾರರು ಮಂಜೂರಾತಿ ಆದೇಶದ ಮೂಲ ಪತ್ರವನ್ನು ನೀಡಲು ರೂ.15,000/- ಗಳ ಲಂಚದ ಹಣಕ್ಕಾಗಿ ಬೇಡಿಕೆ ಇಟ್ಟಿರುತ್ತಾರೆ. ದೂರುದಾರರು ಅಷ್ಟೊಂದು ಹಣ ಕೊಡಲು ಸಾಧ್ಯವಿಲ್ಲ ಎಂದು ತಿಳಿಸಿದಾಗ, ರೂ.5,000/- ಲಂಚದ ಹಣ ತಂದ ಮೇಲೆ ಮಾತ್ರ, ಮಂಜೂರಾತಿ ಆದೇಶ ಪತ್ರ ನೀಡುವುದಾಗಿ ತಿಳಿಸಿರುತ್ತಾರೆ.

IV. ದೂರುದಾರರು ತಮ್ಮ ಬಳಿ ರೂ.4,000/- ಗಳು ಇದ್ದು ಊರಿಗೆ ಹೋಗಿ ಹಣ ತರುತ್ತೇನೆಂದು ಬ್ಯಾಂಕಿನ ಹೊರಗಡೆ ಬಂದು ಅವರ ಮೊಬೈಲ್ ನಂ. 9900225825 ರಿಂದ ಎದುರುದಾರರ ಮೊಬೈಲ್ ನಂ. 9900015729 ಗೆ ಕರೆ ಮಾಡಿ, ಇವಾಗ ರೂ.4,000/- ಮಾತ್ರ ಇರುತ್ತದೆ ಇನ್ನೊಂದು ರೂ.1,000/- ಇರುವುದಿಲ್ಲ ಹಾಗೂ ಅವರಿಗೆ ಕಲಬುರಗಿಯಲ್ಲಿ ಹೊಂದಿಸಲು ಆಗಿರುವುದಿಲ್ಲ. ಊರಿಗೆ ಹೋಗಿ ನಾಳೆ ಪೂರ್ತಿ ಹಣ ತಂದು ಕೊಡುವುದಾಗಿ ತಿಳಿಸುತ್ತಾ, ಎದುರುದಾರರು ಆದೇಶದ ಪ್ರತಿಯನ್ನು ಅವರ ಕೈಯಲ್ಲಿ ಕೊಡುತ್ತಾರೊ ಅಥವಾ ಪೋಸ್ಟ್ ಮೂಲಕ ಕಳುಹಿಸುತ್ತಾರೊ ಎಂದು ಕೇಳಿದಾಗ, ಎದುರುದಾರರು ಆದೇಶದ ಪ್ರತಿಯನ್ನು

ದೂರುದಾರರ ಕೈಯಲ್ಲಿ ಕೊಡುತ್ತೇನೆಂದು ತಿಳಿಸುತ್ತಾ ಲಂಚದ ಹಣಕ್ಕೆ ಒತ್ತಾಯ ಮಾಡಿರುತ್ತಾರೆ. ಸದರಿ ಸಂಭಾಷಣೆಯನ್ನು ದೂರುದಾರರು ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ.

V. ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದೇ ಇದ್ದುದರಿಂದ, ದಿನಾಂಕ: 16/07/2015 ರಂದು ಕಲಬುರಗಿ ಲೋಕಾಯುಕ್ತ ಪೊಲೀಸ್ ಠಾಣೆಗೆ ಹಾಜರಾಗಿ, ತನಿಖಾಧಿಕಾರಿಯ ಮುಂದೆ ದೂರನ್ನು ಮತ್ತು ರೆಕಾರ್ಡ್ ಮಾಡಿಕೊಂಡ ಸಂಭಾಷಣೆಯನ್ನು ದೂರಿನೊಂದಿಗೆ ಸಲ್ಲಿಸಿರುತ್ತಾರೆ. ಅದರಂತೆ ಸದರಿ ಪೊಲೀಸ್ ಠಾಣೆಯಲ್ಲಿ ಮೊ.ಸಂ. 10/2015 ರಂತೆ ಪಿ.ಸಿ.ಕಾಯಿದೆ ಕಲಂ 7, 13(1)(ಡಿ) ಮತ್ತು 13(2) ರಂತೆ ಎದುರುದಾರರ ವಿರುದ್ಧ ಪ್ರಥಮ ವರ್ತಮಾನ ವರದಿ ದಾಖಲಾಗಿರುತ್ತದೆ.

VI. ಅದೇ ದಿನ ಅಂದರೆ ದಿನಾಂಕ: 16/07/2015 ರಂದು ಎದುರುದಾರರು ಅವರು ಕರ್ತವ್ಯ ನಿರ್ವಹಿಸುವ ಜಗತ್ ವೃತ್ತದ ಹತ್ತಿರ ಇರುವ ಡಿ.ಸಿ.ಸಿ., ಬ್ಯಾಂಕ್‌ನಲ್ಲಿ ಲಂಚದ ಹಣ ರೂ.5,000/- ಗಳನ್ನು ಪಡೆದುಕೊಂಡ ಸಂದರ್ಭದಲ್ಲಿ ಲೋಕಾಯುಕ್ತ ಪೊಲೀಸ್‌ರಿಗೆ ಸಿಕ್ಕಿ ಬಿದ್ದಿರುತ್ತಾರೆ.

VII. ಅದೇ ದಿವಸ ಸದರಿ ಲಂಚದ ಹಣ ರೂ.5,000/-ಗಳನ್ನು ಎದುರುದಾರರಿಂದ ಪಂಚನಾಮೆ ಮೂಲಕ ತನಿಖಾಧಿಕಾರಿಯವರು ವಶಪಡಿಸಿಕೊಂಡಿರುತ್ತಾರೆ ಹಾಗೂ ಎದುರುದಾರರನ್ನು ಅದೇ ಕಾರಣಕ್ಕಾಗಿ ದಸ್ತಗಿರಿ ಮಾಡಿರುತ್ತಾರೆ.

VIII. ಸದರಿ ಹಣದ ಬಗ್ಗೆ ತನಿಖಾಧಿಕಾರಿಯು ಎದುರುದಾರರನ್ನು ವಿಚಾರಿಸಿದಾಗ ಸರಿಯಾದ, ತೃಪ್ತಿದಾಯಕವಾದ ಉತ್ತರ ಅಥವಾ ವಿವರಣೆ ಅಥವಾ ಲೆಕ್ಕ ನೀಡಿರುವುದಿಲ್ಲ.

IX. ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ ಮತ್ತು ಇತರ ಅಂಶಗಳು, ಎದುರುದಾರರ ಸತತವಾದ ದುರ್ನಡತೆಯನ್ನು ತೋರಿಸುತ್ತದೆ.

3. ನಂತರ, ಎದುರುದಾರರಿಗೆ ವೀಕ್ಷಣಾ ಟಿಪ್ಪಣಿಯನ್ನು ಕಳುಹಿಸಿ, ಅವರ ದುರ್ನಡತೆಯ ಬಗ್ಗೆ ಇಲಾಖಾ ವಿಚಾರಣೆ ಕೈಗೊಳ್ಳುವ ಸಂಬಂಧ, ಶಿಸ್ತು ಪ್ರಾಧಿಕಾರಕ್ಕೆ ಏಕೆ ಶಿಫಾರಸ್ಸು ವರದಿ ಕಳುಹಿಸಬಾರದು ಎಂಬುದರ ಬಗ್ಗೆ ವಿವರಣೆಯನ್ನು/ಕಾರಣವನ್ನು ಎದುರುದಾರರಿಂದ ಕೇಳಲಾಯಿತು. ಎದುರುದಾರರು ವೀಕ್ಷಣಾ ಟಿಪ್ಪಣಿಯ ಮೇಲೆ ಉತ್ತರವನ್ನು ಸಲ್ಲಿಸಿದ್ದು, ಆಪಾದನೆಗಳನ್ನು ಅಲ್ಲಗಳೆದಿರುತ್ತಾರೆ. ತನಿಖಾಧಿಕಾರಿಗಳ ವರದಿ ಮತ್ತು

ಅದರೊಂದಿಗಿನ ಸಾಕ್ಷ್ಯಗಳ ಹಿನ್ನಲೆಯಲ್ಲಿ ಎದುರುದಾರರ ಸಮಜಾಯಿಷಿಯನ್ನು ಈ ಹಂತದಲ್ಲಿ ಒಪ್ಪಲು ಸಾಧ್ಯವಿರುವುದಿಲ್ಲ.

4. ಆದ್ದರಿಂದ, ಎದುರುದಾರರು ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು, ಅವರ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೇ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ, ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ, 1966 ರ ನಿಯಮಗಳು 3(1)(i) ಮತ್ತು (iii) ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುವುದು ಕಂಡುಬಂದಿರುತ್ತದೆ.

5. ಆದುರಿಂದ, ಎದುರುದಾರರಾದ ಶ್ರೀ ಶ್ರೀಶೈಲ ಬಿನ್ ಮಲ್ಲಿಕಾರ್ಜುನ ಗಂವಾರ, ಪ್ರಥಮ ದರ್ಜೆ ಸಹಾಯಕರು, ಕಲಬುರಗಿ ಮತ್ತು ಯಾದಗಿರ ಜಿಲ್ಲಾ ಸಹಕಾರ ಬ್ಯಾಂಕ್ (ಡಿ.ಸಿ.ಸಿ. ಬ್ಯಾಂಕ್), ಕಲಬುರಗಿ ಜಿಲ್ಲೆ, **(ನಿವೃತ್ತಿ ದಿನಾಂಕ: 30/04/2031)** ರವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರ ಅಡಿಯಲ್ಲಿ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ, ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

6. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ, ಕಲಂ 12(4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯಂತೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮವನ್ನು ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ತಿಳಿಸಲು ಕೋರಲಾಗಿದೆ.

N. Anand 10/1

[ನ್ಯಾಯಮೂರ್ತಿ ಎನ್. ಆನಂದ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.